## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲು ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿಗಳನ್ನು ರಚಿಸುವ ಬಗ್ಗೆ

ಓದಲಾಗಿದೆ: ಆಯುಕ್ತರು, ಆಕುಕ ಸೇವೆಗಳು, ಇವರ ಪತ್ರ, ಸಂಖ್ಯೆ: ಜೆಆರ್ಒ(2) 121/06-07 ದಿನಾಂಕ: 18/03/2008

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ 2008-09 ನೇ ಸಾಲಿನಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲು ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿಗಳನ್ನು ರಚಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 512 ಹೆಚ್‌ಎಸ್‌ಹೆಚ್ 2006,**

**ಬೆಂಗಳೂರು, ದಿನಾಂಕ: 02-04-2008**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವರ್ಗಾವಣೆಗಳನ್ನು ನಿಯಂತ್ರಿಸಿ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ಲಭ್ಯವಾಗುವಂತೆ ಮಾಡುವುದಕ್ಕಾಗಿ 2008-09 ನೇ ಸಾಲಿನಿಂದ ಈ ಕೆಳಕಂಡ ವೃಂದಗಳಿಗೆ ಅನ್ವಯಿಸುವಂತೆ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ನಡೆಸಲು ರಾಜ್ಯಮಟ್ಟದ/ ವಿಭಾಗೀಯ ಮಟ್ಟದ / ಜಿಲ್ಲಾಮಟ್ಟದ ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿಗಳನ್ನು ರಚಿಸಿದ್ದು ವಿವರಗಳನ್ನು ಇದರೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ನಮೂದಿಸಿದೆ-

| ಕ್ರಮ ಸಂಖ್ಯೆ | ವೃಂದಗಳ ಹೆಸರು / ಹುದ್ದೆ |
|---|---|
| 1 | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು (ಜಿ.ಡಿ.ಎಂ.ಓ.) / ಆಯೂಷ ಇಲಾಖೆಯಲ್ಲಿನ ವೈದ್ಯಾಧಿಕಾರಿ ದರ್ಜೆ – I (ಆಯುರ್ವೇದ / ಯುನಾನಿ / ಹೋಮಿಯೋಪತಿ) / ವೈದ್ಯಾಧಿಕಾರಿ ದರ್ಜೆ – II (ಆಯುರ್ವೇದ / ಯುನಾನಿ / ಹೋಮಿಯೋಪತಿ / ಪ್ರಕೃತಿ ಚಿಕಿತ್ಸೆ ಮತ್ತು ಯೋಗ). |
| 2 | ದಂತ ಆರೋಗ್ಯಾಧಿಕಾರಿ |
| 3 | **"ಅರೆ ವೈದ್ಯಕೀಯ ಸಿಬ್ಬಂದಿ"** ಎಂದರೆ;<br><br>ಶುಶ್ರೂಷ ಅಧೀಕ್ಷಕರು / ಹಿರಿಯ ಶುಶ್ರೂಷಕರು / ಶುಶ್ರೂಷಕರು / ಡಯಟೀಷಿಯನ್ / ಕಿರಿಯ ಫಿಜಿಸಿಸ್ಟ್ / ಫಿಜಿಯೋಥೆರಪಿಸ್ಟ್ / ರೇಡಿಯೋಗ್ರಾಫರ್ / ಇ.ಸಿ.ಜಿ.ಟೆಕ್ನೀಷಿಯನ್ / ಕ್ಷ-ಕಿರಣ ತಂತ್ರಜ್ಞ / ಡೆಂಟಲ್ ಮೈಕಾನಿಕ್ / ಫಾರ್ಮಸಿಸ್ಟ್ / ರೆಫ್ರಾಕ್ಷನಿಸ್ಟ್ (ನೇತ್ರ ಸಹಾಯಕರು) / ಕಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ / ಹಿರಿಯ ಮತ್ತು ಕಿರಿಯ ಆರೋಗ್ಯ ಸಹಾಯಕ (ಪುರುಷ ಮತ್ತು ಮಹಿಳಾ) / ಸೋಷಿಯಲ್ ವರ್ಕರ್ / ಜಿಲ್ಲಾ ಶುಶ್ರೂಷ ಮೇಲ್ವಿಚಾರಕ / ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ / ಉಪ ಆರೋಗ್ಯ ಶಿಕ್ಷಣಾಧಿಕಾರಿ / ನಾನ್ ಮೆಡಿಕಲ್ |

| | |
|---|---|
| | ಮೇಲ್ವಿಚಾರಕ / ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ / ಸೈಕಿಯಾಟ್ರಿಕ್ ಸೋಷಿಯಲ್ ವರ್ಕರ್ / ಆರೋಗ್ಯ ನಿರೀಕ್ಷಕ / ಆಹಾರ ನಿರೀಕ್ಷಕ / ಸಹಾಯಕ ವೈದ್ಯಕೀಯ ದಾಖಲಾಧಿಕಾರಿ / ವೈದ್ಯಕೀಯ ದಾಖಲೆಗಳ ತಂತ್ರಜ್ಞ / ಕೆಮಿಸ್ಟ್ / ಎಂಟಮಾಲಾಜಿಸ್ಟ್ / ಪ್ರಾಂಶುಪಾಲರು, ಕಿರಿಯ ಆರೋಗ್ಯ ಸಹಾಯಕರ ತರಬೇತಿ ಸಂಸ್ಥೆ / ಬೋಧಕ / ಹಿರಿಯ ಆರೋಗ್ಯ ಮೇಲ್ವಿಚಾರಕ / ಕ್ಲಿನಿಕಲ್ ಸೈಕಾಲಾಜಿಸ್ಟ್ / ಕಿರಿಯ ಕೆಮಿಸ್ಟ್ / ಕೆಮಿಸ್ಟ್ ಮತ್ತು ಇತರೆ ಇಂತಹ ತತ್ಸಮಾನ ಹುದ್ದೆಗಳಿಗೆ ಸಂಬಂಧಪಟ್ಟ ಹುದ್ದೆಗಳಲ್ಲಿ ಕೆಲಸನಿರ್ವಹಿಸುವ ಸಿಬ್ಬಂದಿ ಹಾಗೂ ಆಯೂಷ್ ಇಲಾಖೆಯಲ್ಲಿನ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಹಾಗೂ ಆಯೂಷ್ ಇಲಾಖೆಯ ಔಷಧ ವಿತರಕರು (ಆಯುರ್ವೇದ / ಯುನಾನಿ), ಶುಶ್ರೂಷಕಿಯರು / ಶುಶ್ರೂಷಕಿ ದರ್ಜೆ – I ಮತ್ತು ದರ್ಜೆ – II. ಹಾಗೂ ತತ್ಸಮಾನ ಹುದ್ದೆಗಳು. |

ಪ್ರಸ್ತುತ, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಚುನಾವಣಾ ನೀತಿ ಸಂಹಿತೆ ಅವಧಿ ಮುಗಿದ ನಂತರ **2008-09** ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಯನ್ನು ಎಲ್ಲಾ ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿಗಳು ಇದಕ್ಕಾಗಿಯೇ ನಿಗದಿಪಡಿಸಲಾಗುವ ವರ್ಗಾವಣೆ ಮಾರ್ಗಸೂಚಿಗಳನ್ನು ಅನುಸರಿಸಿ ವರ್ಗಾವಣೆಗಳನ್ನು ಮಾಡಿ ಮುಗಿಸಲು ಆದೇಶಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಸ್.ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು-I)

ಗೆ:

1) ಮಹಾಲೇಖಪಾಲರು (ಲೆಕ್ಕಪತ್ರ ಃ ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಘನತೆವೆತ್ತ ರಾಜ್ಯಪಾಲರ ಮಾನ್ಯ ಸಲಹೆಗಾರರು, ವಿಧಾನ ಸೌಧ, ಬೆಂಗಳೂರು
3) ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು
4) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
5) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
6) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ ಮೈಸೂರು/ ಬೆಳಗಾಂ / ಗುಲ್ಬರ್ಗ
7) ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು (ನಿರ್ದೇಶಕರ ಮುಖಾಂತರ)
8) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, (ನಿರ್ದೇಶಕರ ಮುಖಾಂತರ)
9) ಎಲ್ಲಾ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರು, (ನಿರ್ದೇಶಕರ ಮುಖಾಂತರ)
10) ಶಾಖಾ ರಕ್ಷಾ ಕಡತ ಃ ಬಿಡಿ ಪ್ರತಿಗಳು

# ಅನುಬಂಧ

## 1. ಜಿಲ್ಲಾಮಟ್ಟದ ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿ

| | | |
|---|---|---|
| (i) | ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು. | ಅಧ್ಯಕ್ಷರು |
| (ii) | ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಉಪಾಧ್ಯಕ್ಷರು |
| (iii) | ಆಯಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ / ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆಯೂಷ್ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

## 2. ವಿಭಾಗೀಯಮಟ್ಟದ ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿಗಳು

ಅ ಬೆಂಗಳೂರು ವಿಭಾಗ:-

| | | |
|---|---|---|
| (i) | **ಪ್ರಾದೇಶಿಕ ಆಯುಕ್ತರು, ಬೆಂಗಳೂರು** | ಅಧ್ಯಕ್ಷರು |
| (ii) | ಬೆಂಗಳೂರು (ಗ್ರಾ) ಜಿಲ್ಲೆಯ ಜಿಲ್ಲಾಧಿಕಾರಿಗಳು. | ಉಪಾಧ್ಯಕ್ಷರು |
| (iii) | ಬೆಂಗಳೂರು (ಗ್ರಾ) ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಸದಸ್ಯರು |
| (iv) | ಜಂಟಿ ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು. (ಆಯುಕ್ತರು, ಆಕುಕ ಸೇವೆಗಳು ರವರಿಂದ ನಾಮ ನಿರ್ದೇಶನ ಮಾಡಲ್ಪಟ್ಟವರು) | ಸದಸ್ಯರು |
| (v) | ಬೆಂಗಳೂರು (ಗ್ರಾ) ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ / ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆಯೂಷ್ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

ಆ ಮೈಸೂರು ವಿಭಾಗ:-

| | | |
|---|---|---|
| (i) | ಪ್ರಾದೇಶಿಕ ಆಯುಕ್ತರು, ಮೈಸೂರು | ಅಧ್ಯಕ್ಷರು |
| (ii) | ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು. | ಉಪಾಧ್ಯಕ್ಷರು |
| (iii) | ಮೈಸೂರು ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಸದಸ್ಯರು |
| (iv) | ಜಂಟಿ ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು. (ಆಯುಕ್ತರು, ಆಕುಕ ಸೇವೆಗಳು ರವರಿಂದ ನಾಮ ನಿರ್ದೇಶನ ಮಾಡಲ್ಪಟ್ಟವರು) | ಸದಸ್ಯರು |
| (v) | ಮೈಸೂರು ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ / ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆಯೂಷ್ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

ಆ ಬೆಳಗಾಂ ವಿಭಾಗ:-

| | | |
|---|---|---|
| (i) | ಪ್ರಾದೇಶಿಕ ಆಯುಕ್ತರು, ಬೆಳಗಾಂ | ಅಧ್ಯಕ್ಷರು |
| (ii) | ಬೆಳಗಾಂ ಜಿಲ್ಲೆಯ ಜಿಲ್ಲಾಧಿಕಾರಿಗಳು. | ಉಪಾಧ್ಯಕ್ಷರು |
| (iii) | ಬೆಳಗಾಂ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಸದಸ್ಯರು |
| (iv) | ಜಂಟಿ ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು. (ಆಯುಕ್ತರು, ಆಕುಕ ಸೇವೆಗಳು ರವರಿಂದ ನಾಮ ನಿರ್ದೇಶನ ಮಾಡಲ್ಪಟ್ಟವರು) | ಸದಸ್ಯರು |
| (v) | ಬೆಳಗಾಂ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ / ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆಯೂಷ್ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

ಇ ಗುಲ್ಬರ್ಗಾ ವಿಭಾಗ:-

| | | |
|---|---|---|
| (i) | ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ | ಅಧ್ಯಕ್ಷರು |
| (ii) | ಗುಲ್ಬರ್ಗಾ ಜಿಲ್ಲೆಯ ಜಿಲ್ಲಾಧಿಕಾರಿಗಳು. | ಉಪಾಧ್ಯಕ್ಷರು |
| (iii) | ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಸದಸ್ಯರು |
| (iv) | ಜಂಟಿ ನಿರ್ದೇಶಕರು, ಆಕುಕ ಸೇವೆಗಳು, ಬೆಂಗಳೂರು. (ಆಯುಕ್ತರು, ಆಕುಕ ಸೇವೆಗಳು ರವರಿಂದ ನಾಮ ನಿರ್ದೇಶನ ಮಾಡಲ್ಪಟ್ಟವರು) | ಸದಸ್ಯರು |
| (v) | ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ / ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆಯೂಷ್ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

3. ರಾಜ್ಯಮಟ್ಟದ ವೃಂದ ನಿರ್ವಹಣಾ ಪ್ರಾಧಿಕಾರ ಮತ್ತು ಕೌನ್ಸಿಲಿಂಗ್ ಸಮಿತಿ

| | | |
|---|---|---|
| (i) | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಬೆಂಗಳೂರು. | ಅಧ್ಯಕ್ಷರು |
| (ii) | ನಿರ್ದೇಶಕರು, ಆರೋಗ್ಯ ಮತ್ತು ಕು.ಕ. ಇಲಾಖೆ / ಆಯೂಷ್ ಇಲಾಖೆ, ಬೆಂಗಳೂರು. | ಸದಸ್ಯರು |
| (iii) | ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ. ಇಲಾಖೆ / ಆಯುಷ್ ಇಲಾಖೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

ಸರ್ಕಾರದ ಅಧೀನ ಕಾರ್ಯದರ್ಶಿ.